

ಡಾ.ವಿನೋದ ಛೆಬ್ಬಿ

**ಗಂಡನಿಗೆ ಕೇಳಿದಾಗಲೆಲ್ಲ ಮನಸ್ಸಿಲ್ಲದಿದ್ದರೂ ಶರೀರ ಒಪ್ಪಿಸಿಕೊಳ್ಳುವ ಹೆಣ್ಣಿನ ಹಿಂದೆ ಆಕೆಯನ್ನು ಕೀಳಾಗಿ ಕಂಡ ಕುಟುಂಬ ಇರಬಹುದು!**

# 131: ನನಗೆ ಸಬಲೀಕರಣ ಬೇಕು-3

ಗಂಡನ ಪರಸಂಬಂಧವನ್ನು ಪ್ರತಿಭಟಿಸಲಾಗದೆ ಇರುವುದಕ್ಕೆ ಕರುಣಾ ಹತ್ತಿರದವರ ತಿರಸ್ಕಾರಕ್ಕೆ ಒಳಗಾಗಿ ಆತ್ಮಗೌರವ ಬೆಳೆಸಿಕೊಳ್ಳಲು ಸಾಧ್ಯವಾಗದೆ ಇರುವುದೇ ಕಾರಣ ಎಂದು ಗೊತ್ತಾಯಿತು. ಆಕೆಯ ಅಲ್ಪಸ್ವಲ್ಪ ಆತ್ಮಗೌರವವನ್ನು ಸಬಲೀಕರಣಕ್ಕಾಗಿ ಬಳಸಿಕೊಳ್ಳುವುದರ ಬಗೆಗೆ ಹೋದ ಸಲ ಮಾತಾಡುತ್ತಿದ್ದೆವು.

ಕರುಣಾಳನ್ನು ಅರ್ಥಮಾಡಿಕೊಳ್ಳಲು ಯತ್ನಿಸಿದೆ. ಆಕೆಯ ಆತ್ಮಗೌರವದ ಕೊರತೆ, ಗಂಡನ ಪರಸಂಬಂಧವನ್ನು ಪ್ರತಿಭಟಿಸದಿರುವ ಮನೋಭಾವ, ಹಾಗೂ ಅಂಥವನೊಡನೆ ಮಲಗುವುದು– ಇವುಗಳ ನಡುವೆ ಏನಾದರೂ ಸಂಬಂಧ ಇರಬಹುದೆ? ಅದಕ್ಕಾಗಿ ಆಕೆಯ ಬಾಲ್ಯವನ್ನು ನೆನಪಿಸಿಕೊಂಡೆ.

ಬಾಲ್ಯದಿಂದಲೂ ಹತ್ತಿರದವರ ಸತತ ತಿರಸ್ಕಾರಕ್ಕೆ ಒಳಗಾದವರಿಗೆ ಹೇಗೆ ಅನ್ನಿಸುತ್ತದೆ? 'ತಾನು ಯಾರಿಗೂ ಬೇಕಿಲ್ಲ' ಎನ್ನುವ ಅನಿಸಿಕೆ, ಕೀಳರಿಮೆ, ಒಂಟಿತನ, ತನ್ನ ಪಾಲಿಗೆ ಯಾರೂ ಇಲ್ಲವೆನ್ನುವ ದಿಕ್ಕುಗೇಡಿತನ, ಅನಾಥಪ್ರಜ್ಞೆ ಇತ್ಯಾದಿ ಕವಿಯುತ್ತದೆ. ಅಂಥವರ ಶರೀರವನ್ನು ಯಾರಾದರೂ ಬಯಸಿ ಮುಟ್ಟಿದಾಗ ಏನೆನ್ನಿಸಬಹುದು? ಅದೊಂದು ಹೊಸ ಅನುಭವ ಎನ್ನಿಸಿ, ತನ್ನ ಶರೀರದಲ್ಲೇನೋ ಮಹತ್ವದ್ದು ಅಡಗಿದೆ ಅನ್ನಿಸುತ್ತದೆ. ವ್ಯಕ್ತಿ ಇಷ್ಟವಾದರೆ ಶರೀರವನ್ನು ವಿನಿಮಯಿಸಿ ಕೀಳರಿಮೆಯನ್ನು ನಿವಾರಿಸಿಕೊಳ್ಳುವ, ಆತ್ಮಗೌರವ ಪಡೆಯುವ ಹವಣಿಕೆ ಹುಟ್ಟುತ್ತದೆ. ಈ ಸಂದರ್ಭದಲ್ಲಿ ಬೆಲೆವೆಣ್ಣೊಬ್ಬಳು ನೆನಪಾಗುತ್ತಿದ್ದಾಳೆ. ಅತ್ಯಂತ ಬುದ್ಧಿವಂತಳಾದ ಆಕೆ ತನ್ನ ಸಮಸ್ಯೆಗಳ ಬಗೆಗೆ ಹೇಳಿಕೊಳ್ಳುವಾಗ, ಆಕೆ ಈ ವೃತ್ತಿಯನ್ನು ಆರಿಸಿಕೊಂಡಿದ್ದು ಹೇಗೆ ಎಂದು ವಿಚಾರಿಸಿದೆ. ಕರುಳು ಕಿವಿಚುವ ಕತೆಯನ್ನು ನಿರ್ಭಾವುಕಳಾಗಿ ತೆರೆದಿಟ್ಟಳು. ಹೆಣ್ಣೆಂಬ ಒಂದೇ ಕಾರಣಕ್ಕೆ ಚಿಕ್ಕಂದಿನಿಂದ ಆಕೆಯನ್ನು ನಿರ್ಲಕ್ಷಿಸಲಾಗಿತ್ತು. ಹತ್ತರ ಪ್ರಾಯದಲ್ಲಿ ಅಣ್ಣಂದಿರು ಆಕೆಯನ್ನು ಲೈಂಗಿಕ ಕ್ರಿಯೆಗೆ ಬಳಸಿಕೊಳ್ಳುತ್ತಿದ್ದರು. ಅದನ್ನು ಅಮ್ಮನಿಗೆ ತಿಳಿಸಿದಾಗ ಏಟು ತಿಂದಿದ್ದು ಆಕೆಯೆ. 'ನೀನೇ ಅವರನ್ನು ಬಲೆಗೆ ಹಾಕಿಕೊಳ್ಳಲು ಆಟ ನಡೆಸಿದ್ದೀಯಾ!' ಎಂಬ ಅಪವಾದ ಬೇರೆ. (ಇಲ್ಲಿ ಹೆಣ್ಣೇ ಹೆಣ್ಣನ್ನು ನಂಬದಿರುವುದು ವಿಪರ್ಯಾಸ!) ಹದಿನೈದಕ್ಕೆ ಕಾಲಿಟ್ಟಾಗ ಮಧ್ಯವಯಸ್ಸಿನ ಗೃಹಸ್ಥನೊಬ್ಬ ಅವಳ ಶರೀರವನ್ನು ಬಯಸಿದ. ಈಕೆಗೇನೂ ಕಿರಿಕಿರಿ ಅನ್ನಿಸಲಿಲ್ಲ. ಯಾಕೆ? ಬಲಾತ್ಕಾರ ಮಾಡುವವರ ಜೊತೆಗೆ ಮಲಗಿ ರೋಸಿಹೋದವಳಿಗೆ ವಿನಂತಿಸಿಕೊಳ್ಳುವವರಿಗೆ ಒಪ್ಪಿಸಿಕೊಳ್ಳುವುದು ಸಮಾಧಾನಕರ ಅಲ್ಲವೆ? ಹೀಗೆ ಒಂಟಿತನವನ್ನು– ತಾತ್ಕಾಲಿಕವಾಗಿ ಆದರೂ ಸರಿ – ದೂರಮಾಡಿಕೊಳ್ಳುತ್ತ ಆತ್ಮಗೌರವವನ್ನು ಹುಡುಕಿಕೊಂಡು ಹೊರಟಳು. ಕ್ರಮೇಣ ತನ್ನನ್ನು ಮೆಚ್ಚುವ ಹುಡುಗರೊಂದಿಗೆ ಮಲಗಲು ತೊಡಗಿದಳು. ಆಕೆಯ ವೇಶ್ಯಾವೃತ್ತಿ ಶುರುವಾಗಿದ್ದು ಹೀಗೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣು ಅಲಕ್ಷ್ಯಕ್ಕೆ ಒಳಗಾಗುವಾಗ ಏನೇನು ದುರಂತ ನಡೆಯಬಹುದು ಎನ್ನುವುದರ ಕಟುಸತ್ಯದ ಕರಾಳ ದರ್ಶನ ಆಯಿತು.

ಕರುಣಾಳ ವಿಷಯದಲ್ಲೂ ಹೀಗೆಯೇ ಆಗಿದೆ. ಆತ್ಮವಿಹೀನತೆಯಿಂದ ಬಳಲುತ್ತಿರುವ ಆಕೆಗೆ ತನ್ನ ಶರೀರವನ್ನು ಗಂಡ ಬಳಸಿಕೊಳ್ಳುವುದಕ್ಕೆ ಅನುಮತಿ ಕೊಡುವುದು ಒಂಟಿತನದಿಂದ ಹೊರಬರುವ ಉಪಾಯ ಆಗಿದೆ. ಶರೀರವು ಕಾಮಕ್ರಿಯೆಯಲ್ಲಿ ತೊಡಗಿರಬೇಕಾದರೆ ಮನದಾಳದೊಳಗೆ ಏನೆಲ್ಲ ನಡೆಯುತ್ತದೆ ಎಂದು ವಿಸ್ಮಯವಾಯಿತು.

ಏನೋ ನೆನಪಾಗಿ ಕರುಣಾಳಿಗೆ ಕೇಳಿದೆ: 'ಮದುವೆಯಾದ ಕೆಲವು ವರ್ಷ ನಿಮ್ಮ ಗಂಡನಿಗೆ ಹೊರಚಾಳಿ ಇರಲಿಲ್ಲವಷ್ಟೆ? ಆಗ ನಿಮ್ಮಿಬ್ಬರ ಬಾಂಧವ್ಯ ಹೇಗಿತ್ತು?' ಹತ್ತು ವರ್ಷಗಳ ತನಕ ಗಂಡ ಇವಳ ಶರೀರವನ್ನು ಆಸಕ್ತಿಯಿಂದ ಬಯಸುತ್ತಿದ್ದ. ಆಗ ಅವನು ತುಂಬಾ ಒಳ್ಳೆಯವನಾಗಿದ್ದ. ಇವಳಿಗೆ ಅಡುಗೆಯನ್ನು ಕಲಿಸಿಕೊಟ್ಟವನೂ ಅವನೇ. ವಿಪರ್ಯಾಸವೆಂದರೆ, ಹಾಗಿದ್ದರೂ ಗಂಡನ ಬಗೆಗೆ ಅಷ್ಟೊಂದು ಪ್ರೀತಿ, ಗೌರವ ಇರಲಿಲ್ಲ! ಬದಲಾಗಿ ಅವನು ಮಾಡುವುದಕ್ಕೆಲ್ಲ ಅಸಡ್ಡೆತನ ತೋರಿಸುತ್ತಿದ್ದಳು. ಇಲ್ಲದ ನೆಪ ಮಾಡಿಕೊಂಡು ಬಯ್ಯುತ್ತಿದ್ದಳು. ಇದು ವಿಚಿತ್ರ ಎನ್ನಿಸಿದರೂ ಇದಕ್ಕೆ ಕಾರಣವಿದೆ. ಆತ್ಮಗೌರವ ಇಲ್ಲದಿರುವವರಿಗೆ ಅನರ್ಹತೆಯ ಒಳಭಾವ ಇರುವುದರಿಂದ ತನ್ನ ಬಗೆಗೆ ಯಾರಾದರೂ ಪ್ರೀತಿಯನ್ನು ವ್ಯಕ್ತಪಡಿಸಿದರೆ ಅದನ್ನು ನಂಬದೆ ಸಂದೇಹದಿಂದ ನೋಡುತ್ತಾರೆ.

ಕರುಣಾಳ ಬಗೆಗೆ ಯೋಚಿಸುತ್ತ ಹೇಳಿದೆ. 'ತಾಯ್ತಂದೆಯರು ನಿಮ್ಮನ್ನು ಪ್ರೀತಿಸದೆ ಅಲಕ್ಷ್ಯದಿಂದ ಕಂಡಿದ್ದಾರೆ. ಇದಕ್ಕೇನು ಕಾರಣ ಇರಬಹುದು?' ಆಕೆ ದುಃಖದಿಂದ ಹೇಳಿದಳು. 'ನಾನು ಅದಕ್ಕೆ ಯೋಗ್ಯಳಲ್ಲ ಎನ್ನುವುದು ಬಿಟ್ಟು ಇನ್ನೇನು ಕಾರಣ ನೀವೇ ಹೇಳಿ?' 'ಅಂದರೆ ನೀವು ಪ್ರೀತಿಗೆ ಯೋಗ್ಯಳಲ್ಲ ಎನ್ನುತ್ತೀರಿ?' ಆಕೆ ಹೌದೆಂದು ತಲೆ ಅಲ್ಲಾಡಿಸಿದಳು. ನಾನು ಸ್ವಲ್ಪ ದೃಢಸ್ವರದಿಂದ ಹೇಳಿದೆ. 'ಕರುಣಾ, ನೀವು ಪ್ರೀತಿಗೆ ಖಂಡಿತವಾಗಿಯೂ ಅರ್ಹರು.' ಅವಳ ಕಣ್ಣಲ್ಲಿ ಸಂದೇಹ ಕಂಡಿತು. ನನ್ನ ಮಾತನ್ನು ಮುಂದುವರಿಸುತ್ತ ಹೇಳಿದೆ: 'ಒಂದು ಉದಾಹರಣೆ ಕೊಡುತ್ತೇನೆ. ಉದ್ಯಾನದಲ್ಲಿ ಕೆಲವು ಚಿಕ್ಕ ಮಕ್ಕಳು ಆಟ ಆಡುತ್ತಿದ್ದಾರೆ ಎಂದು ಕಲ್ಪಿಸಿಕೊಳ್ಳಿ. ಆ ಮಕ್ಕಳನ್ನು ಒಬ್ಬೊಬ್ಬರನ್ನಾಗಿ ಪರೀಕ್ಷಿಸಿ ಹೇಳಿ: ಅವರಲ್ಲಿ ಒಂದು ಮಗುವಾದರೂ ಪ್ರೀತಿಗೆ ಅರ್ಹವಾಗಿಲ್ಲ ಎಂದು ತೋರಿಸಬಲ್ಲಿರಾ?' ಕರುಣಾ ದೃಢವಾಗಿ ಹೇಳಿದಳು. 'ಸಾಧ್ಯವಿಲ್ಲ. ಎಲ್ಲಮಕ್ಕಳೂ ಪ್ರೀತಿಗೆ ಅರ್ಹರೆ!' ನಾನು ನಗುತ್ತ ಹೇಳಿದೆ. 'ಹಾಗೆಯೇ ಕರುಣಾ, ನಿಮ್ಮ ಅಂತರಂಗದೊಳಗೂ ಇಂಥದ್ದೇ ಮಗುವಿದೆ. ಅದಕ್ಕೂ ಪ್ರೀತಿಗೆ ಅರ್ಹತೆಯಿದೆ.' ಎಂದು ಪ್ರತಿಕ್ರಿಯೆಗಾಗಿ ಕಾಯ್ದೆ.

ಕರುಣಾ ಅಂತರ್ಮುಖಿಯಾದಳು. ನಂತರ ಕಣ್ಣೀರುಗರೆಯುತ್ತ ಪಿಸುಗುಟ್ಟಿದಳು. 'ಹೌದು... ನನಗೂ ಪ್ರೀತಿಗೆ ಅರ್ಹತೆಯಿದೆ.' ಅದನ್ನೇ ಕಾಯುತ್ತಿದ್ದ ನಾನು ಒಂದು ಖಾಲಿ ಕುರ್ಚಿಯನ್ನು ತೋರಿಸುತ್ತ ಅದರಲ್ಲಿ ಕೂತುಕೊಳ್ಳುವಂತೆ ಸೂಚಿಸಿದೆ. ಎದುರಿದ್ದ ಇನ್ನೊಂದು ಕುರ್ಚಿಯಲ್ಲಿ ಹುಡುಗಿಯ ಆಕಾರದ ಬೊಂಬೆಯನ್ನು ಕೂಡಿಸಿ ಹೇಳಿದೆ: 'ಇಲ್ಲೊಬ್ಬಳು ಪುಟ್ಟ ಹುಡುಗಿ ಇದ್ದಾಳೆ. ಅವಳನ್ನು ಆಕೆಯ ಅಪ್ಪ ಅಮ್ಮ ಕೀಳಾಗಿ ಕಂಡಿದ್ದಾರೆ. ಆಕೆ ಅತಿಯಾಗಿ ನೊಂದಿದ್ದಾಳೆ. ಇವಳು ನಿಮ್ಮಲ್ಲಿ ಸಹಾಯಕ್ಕಾಗಿ ಯಾಚಿಸುತ್ತಿದ್ದಾಳೆ. ಅದಕ್ಕೆ ಹೇಗೆ ಸ್ಪಂದಿಸುತ್ತೀರಿ?' ಎಂದೆನ್ನುತ್ತ ಕಾಯ್ದೆ.

ಕರುಣಾ ಕಣ್ಣೀರನ್ನು ಒರೆಸಿಕೊಳ್ಳುತ್ತ ಬೊಂಬೆಯನ್ನು ನೋಡಿದಳು. ಕೈಚಾಚಿ ಅದನ್ನು ತಬ್ಬಿಕೊಂಡಳು. ಅದೊಂದು ಜೀವಂತ ಮಗುವೇನೋ ಎನ್ನುವಂತೆ ನನ್ನಕಡೆ ನೋಡಿದಳು. ನಾನು ಹೇಳಿದೆ. 'ಅದಕ್ಕೆ ಸಂತೋಷ ಆಗುವಂತೆ ಏನೇನು ಮಾಡಲು ಬಯಸುತ್ತೀರಿ?'

ಮಗುವನ್ನು ಉದ್ಯಾನಕ್ಕೆ ಕರೆದುಕೊಂಡು ಹೋಗಿ ಆಟವಾಡಿಸುವುದು, ಆಕೆಗೆ ಹೊಸ ಬಟ್ಟೆ ಕೊಡಿಸುವುದು, ಐಸ್‌ಕ್ರೀಮ್ ತಿನ್ನಲು ಕೊಡಿಸುವುದು, ರಾತ್ರಿ ಕತೆ ಹೇಳುತ್ತ ತಟ್ಟುತ್ತ ಮಲಗಿಸುವುದು... ಹೀಗೆ ಹಲವಾರು ವಿಷಯಗಳನ್ನು ಹಂಚಿಕೊಂಡಳು. ಕೊನೆಯಲ್ಲಿ ಮಗುವನ್ನು ಗಟ್ಟಿಯಾಗಿ ತಬ್ಬಿಕೊಂಡು ತನ್ನ ಎದೆಯೊಳಗೆ ಅಡಗಿಸಿಕೊಳ್ಳುವಂತೆ ಸೂಚಿಸಿದೆ.

ಈಗ ಕರುಣಾಳ ಕಣ್ಣೀರು ನಿಂತು ಸಂತೃಪ್ತಿಯ ಕಳೆ ಹರಡಿದುದನ್ನು ಗಮನಿಸಿ ಹೇಳಿದೆ. 'ಕರುಣಾ, ನಿಮ್ಮ ಎದೆಯಲ್ಲಿ ಒಬ್ಬಳು ಪುಟ್ಟ ಹುಡುಗಿ ಇದ್ದಾಳೆ. ಆಕೆ ಬಯಸುವ ಪ್ರೀತಿಯನ್ನು ಕೊಡುವುದು ಹಾಗೂ ಆಕೆಯನ್ನು ಸಂತೋಷದಿಂದ ಇಡುವುದು ಇನ್ನುಮೇಲೆ ನಿಮ್ಮ ಜವಾಬ್ದಾರಿ.' ಆಕೆಯೊಡನೆ ಮುಂದೇನು ಮಾಡಬೇಕೆಂಬುದರ ಬಗೆಗೆ ಚರ್ಚೆ ನಡೆಸಿದೆ.

ಹೀಗೆ ಕರುಣಾಳಿಗೆ ಭಾವನಾತ್ಮಕವಾದ ಸ್ವಾವಲಂಬನೆ ಗೆ ಹೇಳಿಕೊಟ್ಟ ಮೇಲೂ ಸಬಲೀಕರಣ ಆಗಲು ಸುಮಾರು ಕೆಲಸ ಬಾಕಿಯಿತ್ತು. ಅದೇನೆಂಬುದನ್ನು ಮುಂದಿನ ಸಲ ನೋಡೋಣ.

ಉಚಿತ ಸಹಾಯವಾಣಿಗೆ ಮಂಗಳವಾರ ಹಾಗೂ ಶುಕ್ರವಾರ ಕರೆಮಾಡಿ. ಲೈಂಗಿಕ ಸಮಸ್ಯೆಗಳಿಗೆ: **8050255229 (3ರಿಂದ 5ರ ತನಕ)**; ದಾಂಪತ್ಯ ಸಮಸ್ಯೆಗಳಿಗೆ: **8494944888 (11ರಿಂದ ಸಂಜೆ 5ರ ತನಕ).**